ಒಬ್ಬರೇ ಉಳಿದರು. ಪೂರ್ಣ ಹಾಸಿಗೆ ಹಿಡಿದಾಗ, ಆರೈಕೆ ಮಾಡುವ ಇಬ್ಬರು 'ಕೇರ್ ಟೇಕರ್ಸ್' ಅನ್ನು ಗೊತ್ತು ಮಾಡಿಕೊಂಡರು. ಸಾವು ತಾನಾಗಿಯೇ ಬರುವವರೆಗೂ, ಬದುಕಿದವರು.

ಮತ್ತೆ ಹಲವು ಕುಟುಂಬಗಳಲ್ಲಿ, ಒಂದೇ ಅಪಾರ್ಟ್‌ಮೆಂಟಿನಲ್ಲಿ ಗಂಡ ಹೆಂಡತಿ ಮಕ್ಕಳೊಡನೆ ಒಂದು ಫ್ಲಾಟ್‌ನಲ್ಲಿ, ಅಪ್ಪ ಅಮ್ಮ ಇನ್ನೊಂದು ಫ್ಲಾಟ್‌ನಲ್ಲಿ ಇರುವುದನ್ನು ಕಂಡಿದ್ದೇನೆ. ಹೀಗೆ ಹೊಸ ಬಗೆಯ 'ಕೂಡುಕುಟುಂಬ'ದ ವ್ಯವಸ್ಥೆ ರೂಪುಗೊಂಡಿರುವುದನ್ನು ನೋಡಿದ್ದೇನೆ. ಒಂದೇ ಮನೆಯಲ್ಲಿ ವಾಸಿಸುವಾಗ ಉದ್ಭವಿಸುವ ದಿನದಿನದ ಪ್ರತಿಕ್ಷಣದ ಕಿರಿಕಿರಿಯನ್ನು ಇದು ತಪ್ಪಿಸುತ್ತದೆ.

***

ಅತ್ತೆ ಮತ್ತು ತಾಯಿ, ಒಂದೇ ಮನೆಯಲ್ಲಿ ಮಕ್ಕಳೊಡನೆ ಇರುವ ಸಾಮಾಜಿಕ ಸಂದರ್ಭ ಇಂದು ಹೊಸದಲ್ಲ. ತಮ್ಮೊಡನೆ ತಾಯಿಯನ್ನು ಕರೆತಂದು ನಿಭಾಯಿಸಿದ ಹೆಣ್ಣುಮಕ್ಕಳ ಎಷ್ಟೊಂದು ಸಕಾರಾತ್ಮಕ ಉದಾಹರಣೆಗಳಿವೆ. 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ' ಎಂಬ ಪಿತೃಪ್ರಧಾನ ಸಂಪ್ರದಾಯಗಳು ಮುಂದುವರೆದ ಸಮಾಜದಲ್ಲಿಯೂ, ಹೆಣ್ಣುಮಕ್ಕಳು ತಮ್ಮ ತಾಯ್ತಂದೆಯರ ಜವಾಬ್ದಾರಿ ಹೊರಲು ಮುಂದೆ ಬರುತ್ತಿದ್ದಾರೆ. ನನ್ನ ಇಬ್ಬರು ಸಹೋದ್ಯೋಗಿಗಳು, ತಮ್ಮೊಡನೆ ಅತ್ತೆ ಮತ್ತು ತಾಯಿಯನ್ನು ಒಂದು ಸೌಹಾರ್ದ ವಾತಾವರಣದಲ್ಲಿ ನೋಡಿಕೊಂಡ ಉದಾಹರಣೆಯನ್ನು ದಶಕದ ಹಿಂದೊಮ್ಮೆ 'ಹೆಣ್ಣುಮಕ್ಕಳಿರಲಮ್ಮ ಮನೆತುಂಬ' ಎಂಬ ಲೇಖನದಲ್ಲಿ ಬರೆದಿದ್ದೆ. ಇಂದು ಪೊಲೀಸರಿಗೆ ಶರಣಾದ ಮಹಿಳೆಯ ಸುದ್ದಿ ಓದಿದಾಗ, ನನ್ನ ಸಹೋದ್ಯೋಗಿಯಾಗಿದ್ದ ಶಾರದಾ ನೆನಪಾದರು. ಶಾರದಾ ತನ್ನ ಅತ್ತೆ, ಮಾವ ಮತ್ತು ತಾಯಿ ಮೂವರನ್ನೂ ತಮ್ಮ ಫ್ಲಾಟ್‌ನಲ್ಲಿ ಅತ್ಯಂತ ಪ್ರೀತಿಯಿಂದ ನಿಭಾಯಿಸಿದವರು.

ನಾನು ಎಚ್.ಎ.ಎಲ್.ನ 'ವಿಮಾನ ಸಂಶೋಧನಾ ವಿಭಾಗ'ದಲ್ಲಿ ಚೀಫ್ ಡಿಸೈನರ್ ಆದ ಸಮಯದಲ್ಲಿ, ನನಗೆ ರಿಪೋರ್ಟ್ ಮಾಡಿಕೊಳ್ಳುತ್ತಿದ್ದ ಹಲವು ಶಾಖೆಗಳಲ್ಲಿ 'ಫ್ಲೈಟ್ ಟೆಸ್ಟ್ ಸೆಂಟರ್' ಕೂಡಾ ಒಂದಾಗಿತ್ತು. ಅದರ ಮುಖ್ಯಸ್ಥೆ ಕೆ. ಶಾರದಾ. ಆಕೆ ಪರಿಶ್ರಮ, ಪ್ರಾಮಾಣಿಕತೆ ಮತ್ತು ತಾಂತ್ರಿಕ ತಜ್ಞತೆಯ ಹೆಣ್ಣುಮಗಳು. ನನ್ನೊಡನೆ ಆಕೆ ಕೆಲಸ ಮಾಡುತ್ತಿದ್ದ ವರ್ಷಗಳು ನಮ್ಮ ಪ್ರಾಜೆಕ್ಟ್‌ಗಳ ವಿಪರೀತದ ಒತ್ತಡದಲ್ಲಿ ನಾವು ದುಡಿಯುತ್ತಿದ್ದೆವು; ಆಕೆಯೊಡನೆ ಆಕೆಯ ವೈಯಕ್ತಿಕ ಜೀವನದ ವಿವರಗಳನ್ನು ತಿಳಿಯಲು ನನಗೆಂದೂ ಸಾಧ್ಯವಾಗಿರಲಿಲ್ಲ. ಆದರೆ ಆಕೆಯ ಮನೆಯಲ್ಲಿ ಹಿರಿಯ ವಯಸ್ಸಿನ ಅತ್ತೆ, ಮಾವ ಮತ್ತು ತಾಯಿ ಒಟ್ಟಿಗೇ ಇದ್ದಾರೆ ಎಂಬುದಷ್ಟೇ ತಿಳಿದಿತ್ತು. ಮನೆಯಲ್ಲಿ ಮೂವರು ಹಿರಿಯ ವ್ಯಕ್ತಿಗಳನ್ನು, ಅದರಲ್ಲೂ ಒಂದು ದಶಕದಿಂದ ಹಾಸಿಗೆ ಹಿಡಿದು ಅಸ್ವಸ್ಥರಾದ ಅತ್ತೆಯನ್ನೂ ನೋಡಿಕೊಳ್ಳುತ್ತಿರುವ ಆಕೆಯ ಬಗ್ಗೆ ಗೌರವ ಮೂಡಿತ್ತು. ಆಕೆ ಹೇಗೆ ನಿಭಾಯಿಸಿದರೋ ತಿಳಿದಿರಲಿಲ್ಲ. ಶಾರದಾ 2020ರಲ್ಲಿ ನಿವೃತ್ತರಾಗಿದ್ದರು. ಈ ದಿನ ಶಾರದಾಗೆ ಫೋನ್ ಮಾಡಿ ಸೀದಾ ಅವರ ಮನೆಗೆ ಹೋದೆ. ಇಡೀ ದಿನ ಆಕೆಯೊಡನೆ ಕಳೆದಾಗ, ಅವರಮ್ಮನನ್ನು ಪ್ರೀತಿಯಿಂದ ಆಕೆ ಅಪ್ಪಿ ಹಿಡಿದಾಗ ಮನಸ್ಸು ಮುದಗೊಂಡಿತು. ಬದುಕಿನೆಲ್ಲ ಸಮಸ್ಯೆಗಳಿಗೆ ನನ್ನೆದುರು ಸಕಾರಾತ್ಮಕ ಪರಿಹಾರದ ಸಂಕೇತವಾಗಿ ಈ ತಾಯಿ–ಮಗಳು ಮತ್ತು ಅವರಿಗೆ ಬೆಂಬಲವಾಗಿ ನಿಂತ ಶಾರದಾ ಅವರ ಪತಿ ಶ್ಯಾಮಸುಂದರ ಇದ್ದರು.

## ಹೆಗಲು ಕೊಟ್ಟ ಹೆಣ್ಣು ಮಗಳು

ಶಾರದಾ ತಮಿಳುನಾಡಿನ ಸಣ್ಣ ಊರು 'ತೇನ್‌ಕಾಸಿ'ಯಲ್ಲಿ 1960ರ ನವೆಂಬರ್ 18ರಂದು ಹುಟ್ಟಿದವರು. ಅವರ ತಂದೆ ಕೃಷ್ಣನ್ ಅವರಿಗೆ ರೈಲ್ವೆನಲ್ಲಿ ಸ್ಟೇಷನ್ ಮಾಸ್ಟರ್ ಕೆಲಸ. ತಾಯಿ ವಿಶಾಲಾಕ್ಷಿ. ಶಾರದಾ ಈ ಮನೆಗೆ ಎರಡನೇ ಮಗುವಾಗಿ ಹುಟ್ಟಿದರು. ಅವರಿಗೆ ಒಬ್ಬ ಅಕ್ಕ ರಾಜಿ, ಓರ್ವ ತಂಗಿ ವಿಜಯಲಕ್ಷ್ಮಿ ಮತ್ತು ತಮ್ಮ ವೆಂಕಟರಮಣ. ರೈಲ್ವೇಸ್‌ನಲ್ಲಿ ಇದ್ದ ತಂದೆಗೆ ಎರಡು ಮೂರು ವರ್ಷಕ್ಕೊಮ್ಮೆ ವರ್ಗವಾಗುತ್ತಲೇ ಇತ್ತು. ಶಾರದಾ ಸಣ್ಣ ಊರೊಂದರಲ್ಲಿ ಶಾಲೆಗೆ ಹೋಗಲಾರಂಭಿಸಿದರು. ಅಲ್ಲಿಂದ ತಂದೆಗೆ 'ಮಾನಮಧುರೈ'ಗೆ ವರ್ಗವಾಯಿತು. ಹಿರಿಯಕ್ಕ ರಾಜಿಯನ್ನು ಪಿ.ಯು.ಸಿ.ಗೇ ಓದು ಸಾಕೆಂದು ನಿಲ್ಲಿಸಿದರು. ಆಕೆಗೆ ಸಂಬಂಧಿಕರಲ್ಲಿಯೇ ಮದುವೆ ಗೊತ್ತಾಗಿತ್ತು, ಹೆಣ್ಣು ಹೆಚ್ಚು ಓದುವುದು ಬೇಡವಾಗಿತ್ತು. ಆಕೆಗಿಂತ ನಾಲ್ಕು ವರ್ಷಕ್ಕೆ ಚಿಕ್ಕವರಾದ ಶಾರದಾ ಶಾಲೆಯಲ್ಲಿ ಬಲು ಬುದ್ಧಿವಂತ ಹುಡುಗಿ. ಆಗ 11ನೇ ತರಗತಿಯಲ್ಲಿ ಬೋರ್ಡ್ ಎಕ್ಸಾಮ್ ಇರುತ್ತಿತ್ತು, ಅದರ ನಂತರ ಒಂದು ವರ್ಷದ ಪಿಯುಸಿ.

ಹನ್ನೊಂದನೇ ತರಗತಿಯಲ್ಲಿ ಶಾರದಾ ಶಾಲೆಗೆ ಮೊದಲಿಗರಾದರು. ಅದನ್ನು ಕಂಡ ತಂದೆಯ ಸಹೋದ್ಯೋಗಿಯೊಬ್ಬರು, 'ಆಕೆಯನ್ನು ಎಂಜಿನಿಯರಿಂಗ್ ಅಥವಾ ಮೆಡಿಕಲ್‌ಗೆ ಸೇರಿಸು' ಎಂದು ಸಲಹೆ ಕೊಟ್ಟರು.

ನಾಲ್ಕು ಮಕ್ಕಳ ಆ ಕುಟುಂಬದಲ್ಲಿ ತಂದೆಯದೊಂದೇ ಸಂಬಳ. ತಂದೆ ಶಾರದಾಗೆ ಹೇಳಿದರು – 'ನಿನ್ನನ್ನು ಹಾಸ್ಟೆಲ್‌ನಲ್ಲಿ ಇರಿಸಿ, ಐದು ವರ್ಷದ ಎಂಜಿನಿಯರಿಂಗ್ ಓದಿಸುವುದು ಕಷ್ಟ'. ಹಾಗೆಂದೇ ಶಾರದಾ 11ನೇ ತರಗತಿ ಮುಗಿಸಿ, ಮಧುರೈನ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿಗೆ ಡಿಪ್ಲೊಮಾ ಕೋರ್ಸ್‌ಗೆ ಸೇರಿದರು. ಮೊದಲ ವರ್ಷವನ್ನು 'ಪ್ರಿ ಟೆಕ್ನಿಕಲ್ ಕೋರ್ಸ್' (ಪಿಟಿಸಿ) ಎಂದು ಕರೆಯುತ್ತಾರೆ. ಈ 'ಪಿಟಿಸಿ' ಮುಗಿಸಿದವರು, ಪಿಯುಸಿ ಮಾಡಿದವರಂತೆಯೇ ಎಂಜಿನಿಯರಿಂಗ್‌ಗೆ ಸೇರಬಹುದಿತ್ತು. ಶಾರದಾ ಎಂಜಿನಿಯರಿಂಗ್ ಸೀಟಿಗೆ ಅರ್ಜಿ ಹಾಕಿದರು. ಇಷ್ಟರಲ್ಲಿ ಅವರ ತಂದೆಗೆ ಶಿವರಕೊಟ್ಟೈ ಎಂಬ ಜಾಗಕ್ಕೆ ವರ್ಗವಾಗಿತ್ತು. ಅದು ಎಂಟೇ ಮನೆಗಳಿದ್ದ ಅತಿ ಸಣ್ಣ ಹಳ್ಳಿ. ಆದರೆ ಇಲ್ಲಿಂದ ಮಧುರೈಗೆ ಹತ್ತಿರವಿದ್ದ ತಿರುಪರಗುಂದ್ರಂಗೆ ರೈಲು ಹೋಗುತ್ತಿತ್ತು. ಹಾಗೆಂದೇ ಶಾರದಾ ತಿರುಪರಗುಂದ್ರಂನಲ್ಲಿಯ 'ತ್ಯಾಗರಾಜ ಎಂಜಿನಿಯರಿಂಗ್ ಕಾಲೇಜ್'ಗೆ ಸೇರಿದರು. ಇದು 'ಮಧುರೈ ಕಾಮರಾಜ ವಿಶ್ವವಿದ್ಯಾಲಯ'ಕ್ಕೆ ಸೇರಿದ್ದ ಕಾಲೇಜು. ಮನೆಯಿಂದ ದಿನವೂ ರೈಲಿನಲ್ಲಿ ಕಾಲೇಜಿಗೆ ಹೋಗಿ ಬರತೊಡಗಿದರು. ಹಾಸ್ಟೆಲ್‌ನ ಖರ್ಚು ಇರಲಿಲ್ಲ. ಆಗಷ್ಟೇ ಆರಂಭವಾಗಿದ್ದ 'ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್' ಬ್ರಾಂಚ್ ಅನ್ನು ಶಾರದಾ ಆರಿಸಿಕೊಂಡರು.

ಶಾರದಾ ವಿಶ್ವವಿದ್ಯಾಲಯಕ್ಕೆ ಮೊದಲ ರ್‍ಯಾಂಕ್ ಬಂದು, ಚಿನ್ನದ ಪದಕ ಪಡೆದರು. 'ಪಬ್ಲಿಕ್ ಸೆಕ್ಟರ್'



ಶಾರದಾ, ತಾಯಿ ವಿಶಾಲಾಕ್ಷಿ ಅವರೊಡನೆ